VIJAYAKUMAR KANNUR
Digitally signed by VIJAYAKUMAR KANNUR
Date: 2026.01.13 16:58:08 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 13.01.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಎಫ್ ಬಿ ವಕೀಲರಿಂದ :**

ನಿಪಿ 1 ರ ಚೆಕ್ ನ್ನು ನಾನೇ ಬರೆದು ತುಂಬಿರುವೆನು. ಆರೋಪಿ ನನ್ನ ಮುಂದೆ ಚೆಕ್ ನ್ನು ಸಹಿ ಮಾಡಿ ಹಾಗೂ ಹಣ ನಮೂದು ಮಾಡಿ ಕೊಟ್ಟಿರುವರು. ಈ ಸಂಗತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 1 ರ ಚೆಕ್ ನ್ನು ಆರೋಪಿಯು ಮಲ್ಲಪ್ಪ ಗುಡ್ಡದಮನಿ ಎಂಬುವವರಿಗೆ ನೀಡಿರುವುದನ್ನು ನಾನು ದುರುಪಯೋಗಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಈ ಚೆಕ್ ಅಮಾನ್ಯಗೊಂಡ ನಂತರ ಆರೋಪಿಗೆ ನೋಟಿಸು ನೀಡುವ ಸಲುವಾಗಿ ನಾನು ಸ್ವತಃ ನಮ್ಮ ವಕೀಲರ ಹತ್ತಿರ ಹೋಗಿದ್ದು ಆ ಸಮಯದಲ್ಲಿ ಮಲ್ಲಪ್ಪ ಗುಡ್ಡದಮನಿ ಎಂಬುವವನು ಸಹ ತನ್ನ ವೈಯಕ್ತಿಕ ಕೆಲಸದ ಸಲುವಾಗಿ ಆ ವಕೀಲರ ಹತ್ತಿರ ಬಂದಿದ್ದನು.

2. ನಿಪಿ 4 ರ ನೋಟಿಸಿನಲ್ಲಿ ದೂರುದಾರನ ಹೆಸರು ಮಲ್ಲಪ್ಪ ಗುಡ್ಡದಮನಿ ಅಂತ ಬರೆದಿರುವರು ಎಂದರೆ ಸರಿ. ಆ ನೋಟಿಸಿನಲ್ಲಿ ನನ್ನ ಹೆಸರನ್ನು ತಪ್ಪಾಗಿ ನಮೂದು ಮಾಡಿರುವುದು ಗೊತ್ತಾದ ನಂತರ ನಮ್ಮ ವಕೀಲರಿಗೆ ನಾನು ಭೇಟಿಯಾಗಿ ಆ ಹೆಸರನ್ನು ತಿದ್ದುಪಡಿ ಮಾಡಿ ಹೊಸ ನೋಟಿಸು ಕಳುಹಿಸಿಕೊಡುವಂತೆ ಕೇಳಿಕೊಂಡಿರುವೆನು. ಈ ನೋಟಿಸು ಆರೋಪಿಗೆ ಜಾರಿಯಾದ ನಂತರ ಆತ ನನ್ನ ಹತ್ತಿರ ಬಂದು ಭೇಟಿಯಾಗಿ 1 ತಿಂಗಳವರೆಗೆ ಕಾಯುವಂತೆ ವಿನಂತಿಸಿಕೊಂಡಿರುವನು. ಈ ಸಂಗತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಮಲ್ಲಪ್ಪ ಗುಡ್ಡದಮನಿ ಆತ ನನಗೆ ಹೇಳಿರುವುದರಿಂದ ನನ್ನ ಮತ್ತು ಆರೋಪಿಯ ಮಧ್ಯ ಯಾವುದೇ ಹಣಕಾಸಿನ ವ್ಯವಹಾರ ಅಗದೇ ಇದ್ದರೂ

ಸಹಿತ ನಾನು ಈ ಸುಳ್ಳು ದೂರು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಮಲ್ಲಪ್ಪ ಗುಡ್ಡದಮನಿಯ ಇತನ ಹೆಸರಿನಲ್ಲಿ ಯಾವುದೇ ಆಸ್ತಿಗಳು ಇರುವುದಿಲ್ಲ ಮತ್ತು ಆತನಿಗೆ ಯಾವುದೇ ಆದಾಯದ ಮೂಲಗಳು ಸಹ ಇರುವುದಿಲ್ಲ, ಆ ಕಾರಣಕ್ಕೆ ಆತ ನಿಪಿ 1 ರ ಚೆಕ್ ನ್ನು ನನಗೆ ನೀಡಿರುವನು ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ಮಧ್ಯೆ ಯಾವುದೇ ಹಣಕಾಸಿನ ವ್ಯವಹಾರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆ ಆರೋಪಿಯ ವಿರುದ್ದ ಈ ಸುಳ್ಳು ದೂರು ದಾಖಲು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ